# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು (ಘ.ತ್ಯಾ.ನಿ)ರವರ ಕಛೇರಿ, ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ಆವರಣ,
ಎನ್.ಆರ್.ಚೌಕ, ಬೆಂಗಳೂರು-560002

---

ಸಂ:ಮು.ಆ. /ಆ.ಶಾ./ಪಿ.ಆರ್./113/2022-23 ದಿನಾಂಕ: 9-08-2023

**ಸುತ್ತೋಲೆ**

ವಿಷಯ : ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಬಿಎಸ್‌ಡಬ್ಲ್ಯೂಎಂಎಲ್ ಕಛೇರಿಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಬಳಕೆ ನಿಷೇಧಿಸುವ ಬಗ್ಗೆ.

ಉಲ್ಲೇಖ: (1) ರಾಜ್ಯ ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ದಿನಾಂಕ: 11-03-2016.

(2) ಪ್ಲಾಸ್ಟಿಕ್ ನಿಷೇಧ ಕಾಯ್ದೆ 2016 ಮತ್ತು ತಿದ್ದುಪಡಿ ನಿಯಮಗಳು 2021-22.

(3) ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಜಿ-ಡಿಎಲ್-ಇ-12082021-228947, ದಿನಾಂಕ: 12-08-2021.

(4) ರಾಜ್ಯ ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್‌ಇಇ 77 ಇಎನ್‌ಜಿ 2022, ದಿನಾಂಕ: 30.06.2022.

**********

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಗಟ್ಟಲು ಕೇಂದ್ರ ಸರ್ಕಾರವು ಪ್ಲಾಸ್ಟಿಕ್ ನಿಷೇಧ ಕಾಯ್ದೆ ಹೊರಡಿಸಲಾಗಿದ್ದು ಉಲ್ಲೇಖಿತ ನಿಯಮ ಮತ್ತು ಅಧಿಸೂಚನೆಗಳನ್ವಯ ಏಕ ಬಳಕೆಯ ಪ್ಲಾಸ್ಟಿಕ್‌ಗಳ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಏಕ ಬಳಕೆ ಪ್ಲಾಸ್ಟಿಕ್‌ನ್ನು ನಿಷೇಧಿಸಿ ಅಧಿಸೂಚನೆಯನ್ನು ಈಗಾಗಲೇ ಹೊರಡಿಸಲಾಗಿರುತ್ತದೆ. ಆದರೂ ಸಹ ಕೆಲವು ಸಂದರ್ಭಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆಯಾಗುತ್ತಿರುವುದು ಕಂಡು ಬಂದಿರುತ್ತದೆ.

ಈ ನಿಟ್ಟಿನಲ್ಲಿ ಪಾಲಿಕೆಯ ಎಲ್ಲಾ ಕಛೇರಿಗಳಲ್ಲಿ ನಿಷೇಧಿತ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿದ್ದು ಈ ಕೆಳಕಂಡಂತೆ ಕ್ರಮವಹಿಸಲು ಸೂಚಿಸಲಾಗಿರುತ್ತದೆ.

1. ಪಾಲಿಕೆಯಲ್ಲಿನ ಸಭೆಗಳಲ್ಲಿ ಹಾಗೂ ಬಿಎಸ್‌ಡಬ್ಲ್ಯೂಎಂಎಲ್‌ನಲ್ಲಿ ಎಲ್ಲಾ ಸಭೆಗಳಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲ್‌ಗಳನ್ನು ಬಳಸುವಂತಿರುವುದಿಲ್ಲ. ಬದಲಾಗಿ ಸ್ಟೀಲ್ ಅಥವಾ ಗಾಜಿನ ಲೋಟ / ಬಾಟಲ್‌ಗಳನ್ನು ಬಳಸಬಹುದಾಗಿರುತ್ತದೆ.
2. ಪ್ಲಾಸ್ಟಿಕ್ ಬ್ಯಾಗ್ ಹಾಗೂ ಪ್ಲಾಸ್ಟಿಕ್‌ನ ಫುಡ್ ಪ್ಯಾಕಿಂಗ್ ಮಾಡಿದ ಊಟ / ಉಪಹಾರಗಳನ್ನು ಬಳಸುವಂತಿರುವುದಿಲ್ಲ. ಬದಲಾಗಿ ಊಟದ ಡಬ್ಬಗಳು / ಕ್ಯಾರಿಯರ್‌ಗಳ ಮೂಲಕ ಊಟ ಹಾಗೂ ಉಪಹಾರವನ್ನು ತರಿಸುವ ವ್ಯವಸ್ಥೆ ಮಾಡಿಕೊಳ್ಳುವುದು.
3. ಸಭೆ ಸಮಾರಂಭಗಳನ್ನು ಆಯೋಜಿಸಿದಾಗ ಪ್ಲಾಸ್ಟಿಕ್ ತಟ್ಟೆ, ಲೋಟ, ಚಮಚ ಮತ್ತು ಇತರೆ ವಸ್ತುಗಳನ್ನು ಬಳಸುವಂತಿಲ್ಲ. ಬದಲಾಗಿ ಸ್ಟೀಲ್ ಕಟ್‌ಲೇರಿ ಬ್ಯಾಂಕ್‌ನ್ನು ತೆರೆದು ಅವಶ್ಯಕ ಸ್ಟೀಲ್ ಸಾಮಾನುಗಳನ್ನು ಖರೀದಿಸಿ ಬಳಸುವುದು.

4. ಕಛೇರಿಗಳಲ್ಲಿ ಇನ್ನಿತರ ನಿಷೇಧಿತ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳಾದ ಪ್ಲಾಸ್ಟಿಕ್ ಸ್ಟಿಕ್ ಹೊಂದಿರುವ ಇಯರ್‌ಬಡ್, ಬಲೂನ್ ಗಳಿಗೆ ಪ್ಲಾಸ್ಟಿಕ್ ಸ್ಟಿಕ್‌ಗಳು, ಕ್ಯಾಂಡಿ ಸ್ಟಿಕ್‌ಗಳು, ಐಸ್ಕ್ರೀಂ ಪ್ಲಾಸ್ಟಿಕ್ ಸ್ಟಿಕ್‌ಗಳು, ಅಲಂಕಾರಿಕ ಕಾರ್ಯಗಳಿಗೆ ಬಳಸುವ ಥರ್ಮೋಕೋಲ್‌ಗಳನ್ನು ಉಪಯೋಗಿಸುವಂತಿರುವುದಿಲ್ಲ.
5. ಸಭೆ ಸಮಾರಂಭಗಳಿಗೆ ಉಪಯೋಗಿಸಬಹುದಾದ ಪ್ಯಾಕಿಂಗ್ ಪ್ಲಾಸ್ಟಿಕ್ ಅದರಲ್ಲೂ ಸ್ವೀಟ್ ಬಾಕ್ಸ್ ಗಳ ಮೇಲೆ, ಆಹ್ವಾನ ಪತ್ರಿಕೆಗಳ ಮೇಲೆ, ಸಿಗರೇಟ್ ಪ್ಯಾಕೆಟ್‌ಗಳ ಮೇಲೆ ಬಳಸಲಾಗುವ ಪ್ಯಾಕಿಂಗ್ ಪ್ಲಾಸ್ಟಿಕ್‌ನ್ನು ಉಪಯೋಗಿಸುವಂತಿಲ್ಲ.
6. ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು ಮತ್ತು ಥರ್ಮೋಕೋಲ್‌ನಿಂದ ಉತ್ಪತ್ತಿಯಾಗುವ / ಬಳಸುವ ವಸ್ತುಗಳು ಹಾಗೂ ಪ್ಲಾಸ್ಟಿಕ್ ಅಥವಾ ಪಿವಿಸಿ ಬ್ಯಾನರ್‌ಗಳನ್ನು ಬಳಸುವಂತಿಲ್ಲ. ಬದಲಾಗಿ ಬಟ್ಟೆ ಚೀಲಗಳು ಹಾಗೂ ಬಟ್ಟೆ ಬ್ಯಾನರ್‌ಗಳನ್ನು ಬಳಸಬಹುದಾಗಿರುತ್ತದೆ.

ಮುಖ್ಯ ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ವ್ಯವಸ್ಥಾಪಕ ನಿರ್ದೇಶಕರು, ಬಿಬಿಎಂಪಿ ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ಎಲ್ಲಾ ಇಲಾಖೆಯ ವಿಶೇಷ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
3. ಎಲ್ಲಾ ವಲಯದ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಎಲ್ಲಾ ವಲಯದ ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ.
5. ಎಲ್ಲಾ ಮುಖ್ಯ ಅಭಿಯಂತರರು, ಬಿಬಿಎಂಪಿರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
6. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರು, ಬಿಬಿಎಂಪಿರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
7. ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಬಿಬಿಎಂಪಿರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
8. ಎಲ್ಲಾ ವಿಭಾಗದ ಕಾ.ಅ./ಸ.ಕಾ.ಅ. ಬಿಬಿಎಂಪಿರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
9. ಎಲ್ಲಾ ಸಂಭಂದಿಸಿದ ಕೇಂದ್ರ ಕಛೇರಿ ಮತ್ತು ವಲಯದ ಅಧಿಕಾರಿಗಳು ಮತ್ತು ಸಿಬ್ಬಂಧಿಗಳ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
10. ಕಛೇರಿ ಪ್ರತಿ.